## ನಿಪ್ಪಾಣಿ ಟೌನ್‌ನಲ್ಲಿರುವ ಪೋಲೀಸ್ ಠಾಣೆಗಳು

೧೯೫೩. ಶ್ರೀ ವೀರಕುಮಾರ್ ಎ. ಪಾಟೀಲ್ (ನಿಪ್ಪಾಣಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಿಪ್ಪಾಣಿ ಟೌನ್‌ನಲ್ಲಿರುವ ಒಟ್ಟು ಪೋಲೀಸ್ ಠಾಣೆಗಳು ಎಷ್ಟು, ಹಾಗು ಪ್ರತಿ ಪೋಲೀಸ್ ಠಾಣೆಯ ಸಿಬ್ಬಂದಿ ಬಲವೆಷ್ಟು? (ಪ್ರತಿ ಠಾಣೆಯಲ್ಲಿರುವ ಪುರುಷ ಹಾಗು ಮಹಿಳಾ ಕಾನ್ಸ್‌ಟೇಬಲ್‌ಗಳ ಸಂಖ್ಯೆಯನ್ನು ಪ್ರತ್ಯೇಕವಾಗಿ ಒದಗಿಸುವುದು)

ಆ) ಪೋಲೀಸ್ ಸಿಬ್ಬಂದಿಯು ಆ ಟೌನಿನ ಜನಸಂಖ್ಯೆಗೆ ಅನುಗುಣವಾಗಿದೆಯೇ,

ಇ) ಈ ನಗರದಲ್ಲಿರುವ ಪೋಲೀಸ್ ಸಿಬ್ಬಂದಿಗೆ ಸರ್ಕಾರವು ವಸತಿ ಗೃಹಗಳನ್ನು ಒದಗಿಸಿದೆಯೆ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—

ಅ) ಪೋಲೀಸ್ ಠಾಣೆಗಳು : ೨

ಸಿಬ್ಬಂದಿ ವಿವರ ಕೆಳಕಂಡಂತಿದೆ.

| | ಪಿಎಸ್‌ಐ | ಎಎಸ್‌ಐ | ಹೆಚ್‌ಸಿ | ಪಿಸಿ |
|---|---|---|---|---|
| ೧) ನಿಪ್ಪಾಣಿ ಟೌನ್ ಪೋಲೀಸ್ ಠಾಣೆ | | | | |
| ಪುರುಷರು | ೧ | — | ೫ | ೨೦ |
| ಮಹಿಳಾ ಪೋಲೀಸ್ | | ಇಲ್ಲ | | |
| ೨) ಬಸವೇಶ್ವರ ಚೌಕ ಪೋಲೀಸ್ ಠಾಣೆ | | | | |
| ಪುರುಷರು | ೨ | ೨ | ೭ | ೩೧ |
| ಮಹಿಳಾ ಪೋಲೀಸ್ | — | — | ೧ | ೪ |
| ಒಟ್ಟು | ೩ | ೨ | ೧೩ | ೫೫ |

ಆ) ಇದೆ.

ಇ) ೧೭ ಪೋಲೀಸ್ ಸಿಬ್ಬಂದಿಗೆ ವಸತಿ ಗೃಹ ಒದಗಿಸಲಾಗಿದೆ.

ಶ್ರೀ ವೀರಣ್ಣ —ಮಾನ್ಯ ಅಧ್ಯಕ್ಷರೇ, ಪೋಲೀಸಿನವರಿಗೆ ವಸತಿ ಸೌಕರ್ಯವನ್ನು ಒದಗಿಸಿ ಕೊಡುವ ಉದ್ದೇಶದಿಂದ ಸರ್ಕಾರ ಈ ಕಾರ್ಯಕ್ರಮವನ್ನು ಈ ಯೋಜನೆ ಅಡಿಯಲ್ಲಿ ಈ ವರ್ಷ ಜಾರಿಗೆ ತಂದಿದೆ. ಈ ಕೇಸನ್ನು ಹಂತ ಹಂತವಾಗಿ ಮಾಡಲಾಗುವುದು.

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕಾರ್ಮಿಕ ಸಂಘದ ಚುನಾವಣೆ ಬಗ್ಗೆ

೧೫೫೩. ಶ್ರೀ ಬಾಬುರೆಡ್ಡಿ ವಿ. ತಂಗಳ್ (ಬೀಳಗಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಮಾನ್ಯತೆ ನೀಡಲು ಅದರ ಅಧೀನ ಕಾರ್ಮಿಕ ಸಂಘದ ಚುನಾವಣೆ ನಡೆಸಿದ್ದು ನಿಜವೇ,

ಆ) ಈ ಚುನಾವಣೆಯಲ್ಲಿ ಅಧಿಕ ಮತ ಪಡೆದು ಜಯಗಳಿಸಿದ ಕಾರ್ಮಿಕ ಸಂಘ ಯಾವುದು,

ಇ) ಹಾಗಿದ್ದರೆ ಈ ಸಂಘಟನೆಯಿಂದ ಪ್ರತಿನಿಧಿಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಆಡಳಿತ ಮಂಡಲಿಗೆ ನಾಮಕರಣ ಮಾಡಲಾಗಿದಯೆ,

ಈ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು,

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ) ನಿಜ.

ಆ) ರಾಜ್ಯ ವಟ್ಟದಲ್ಲಿ ಕೆ. ಎಸ್. ಆರ್. ಟಿ. ಸಿ. ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್ ಹೆಚ್ಚು ಮತ ಗಳಿಸಿದೆ.

ಇ) ಇಲ್ಲ

ಈ) ಈ ವಿಷಯವು ಪರಿಶೀಲನೆಯಲ್ಲಿದೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ). ಮಾನ್ಯ ಅಧ್ಯಕ್ಷರೇ, ಅನೇಕ ವರ್ಷಗಳಿಂದ ಕೆ.ಎಸ್.ಆರ್.ಟಿ.ಸಿ. ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್ ಕಳೆದ ವರ್ಷ ಡಿಸೆಂಬರ್ ತಿಂಗಳಲ್ಲಿ ಮಾನ್ಯತೆ ಪಡೆಯಲು ಚುನಾವಣೆ ನಡೆಸಿದ್ದು, ಚುನಾವಣೆಯಲ್ಲಿ ಕೆ.ಎಸ್.ಆರ್.ಟಿ.ಸಿ. ಸ್ಟಾಫ್ ಅಂಡ್ ಫೆಡರೇಷನ್ ಮಾನ್ಯ ಸಚಿವರು ಹೇಳಿದಂತೆ ರಾಜ್ಯಮಟ್ಟದಲ್ಲಿ ಸುಮಾರು ೧೩ ಕಡೆಗಳಲ್ಲಿ ಬಹುಮತ ಪಡೆಯುವಂತಹ ಪ್ರಸಂಗ ಬಂತು. ಆದ್ದರಿಂದ ನಾನು ಮಾನ್ಯ ಸಚಿವರನ್ನು ಕೇಳುತ್ತೇನೆ, ಹಿಂದೆ ಇದ್ದಂತಹ ಕಾರ್ಮಿಕ ಸಂಘಕ್ಕೆ ಪೂರ್ವಭಾವಿಯಾಗಿ ಕಾರ್ಮಿಕ ಸಂಘಟನೆಯ ಪ್ರತಿನಿಧಿಗಳನ್ನಾಗಿ ಶ್ರೀ ಶ್ರೀಕಂಠಮೂರ್ತಿ ಮತ್ತು ಶ್ರೀ ಸಂಪಂಗಿಯವರಿಗೆ ಆಡಳಿತ ಮಂಡಲಿಯಲ್ಲಿ ಪ್ರಾತಿನಿಧ್ಯ ನೀಡಲಾಗಿತ್ತು. ಆದರೆ ಹೊಸದಾಗಿ ಚುನಾಯಿತರಾಗಿ ಬಂದಿರುವ ಕಾರ್ಮಿಕ ಸಂಘದ ಪ್ರತಿನಿಧಿಗಳಿಗೆ ಆಡಳಿತ ಮಂಡಲಿಯಲ್ಲಿ ಇದುವರೆವಿಗೂ ಪ್ರಾತಿನಿಧ್ಯವನ್ನು ಕೊಟ್ಟಿಲ್ಲ. ಚುನಾವಣೆಯಾಗಿ ಸುಮಾರು ೭ ತಿಂಗಳಾಗಿವೆ. ಶ್ರೀಮಾನ್ ಎಂ.ಎಸ್. ಕೃಷ್ಣನ್ ನೇತೃತ್ವದ ಕಾರ್ಮಿಕ ಸಂಘ ಬಹುಮತದಿಂದ ಗೆದ್ದು ಬಂದಿದೆ. ಇಂತಹ ಸಂಘಕ್ಕೆ ಆಡಳಿತ ಮಂಡಲಿಯಲ್ಲಿ ಪ್ರಾತಿನಿಧ್ಯ ಕೊಡಲು ಕಾರ್ಮಿಕ ಸಚಿವರು ಪೂರ್ವಗ್ರಹ ಪೀಡಿತರಾಗಲು ಕಾರಣ ಏನು ? ದಯವಮಾಡಿ ಸರ್ಕಾರದವರು ಚುನಾಯಿತವಾದ ಕಾರ್ಮಿಕ ಸಂಘಕ್ಕೆ ಆಡಳಿತ ಮಂಡಲಿಯಲ್ಲಿ ಪ್ರಾತಿನಿಧ್ಯ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಪಿ. ಜಿ. ಆರ್, ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ೧೫ ವರ್ಷಗಳಿಂದ ಹೋರಾಟ ಮಾಡಿ ಚುನಾವಣೆಗಳನ್ನು ನಡೆಸಿದರೆಂದು ಮತ್ತು ಅದಕ್ಕೆ ಮಾನ್ಯತೆ ಈಗ ಕೊಡತಕ್ಕಂತಹ ಪ್ರಸಂಗ ಬಂತು ಎಂದು ಹೇಳುತ್ತಿರುವುದು ಸತ್ಯಕ್ಕೆ ದೂರವಾದುದು. ಮೊದಲಿನಿಂದಲೂ ಬೇಡಿಕೆ ಇತ್ತು ಹೋರಾಟವೇನೂ ನಡೆದಿಲ್ಲ. ನಾನು ಈ ಖಾತೆಯ ಮಂತ್ರಿಯಾಗಿ ಜವಾಬ್ದಾರಿ ವಹಿಸಿಕೊಂಡ ಮೇಲೆ ತಕ್ಷಣ ಚುನಾವಣೆಯನ್ನು ಮಾಡಿಸಿದೆ. ಚುನಾವಣೆಯಲ್ಲಿ ೫೧ ಪರ್ಸೆಂಟ್‌ಗಿಂತ ಜಾಸ್ತಿ ಎಲೆಕ್ಟ್ ಆದವರನ್ನು ರೆಕಗ್‌ನೈಜ್ ಮಾಡಿದ್ದೇವೆ. ಟ್ರೇಡ್ ವರ್ಕರ್ಸ್ ರಿಪ್ರೆಸಂಟೇಟಿವ್ಸ್ ಇಷ್ಟಾಗಿರುತ್ತಾರೆ. ಅವರು ಕಾರ್ಮಿಕರ ಕಷ್ಟಸುಖಗಳನ್ನು ಹೇಳಲು ನಾವು ಮಾನ್ಯತೆ ಕೊಟ್ಟಿದ್ದೇವೆ. ಎರಡನೆಯದಾಗಿ ಇವತ್ತು ಯಾವುದೇ ರೀತಿಯಾಗಿ ಕಾರ್ಮಿಕರಲ್ಲಿ ಮತ್ತು ಆಡಳಿತ ಮಂಡಲಿಯಲ್ಲಿ ಭಿನ್ನಾಭಿಪ್ರಾಯಗಳು ಇಲ್ಲ. ಕಾರ್ಮಿಕರಿಗೆ ಯಾವುದೇ ರೀತಿಯಿಂದ ಆಡಳಿತ ಮಂಡಲಿಯವರ ಕಿರುಕುಳ ಕೊಡುತ್ತಿಲ್ಲ. ಇಬ್ಬರ ನಡುವೆ ಒಳ್ಳೆಯ ಸಂಬಂಧ ಈ ಸಂದರ್ಭದಲ್ಲಿ ಇದೆ. ಜೊತೆಗೆ ಆಡಳಿತ ಮಂಡಲಿಯಲ್ಲಿ ಇವರಿಗೆ ಪ್ರಾತಿನಿಧ್ಯವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಸದಸ್ಯರು ಹೇಳುತ್ತಿರುವುದು ಕೆ.ಎಸ್.ಆರ್.ಟಿ.ಸಿ. ಬೋರ್ಡ್‌ನಲ್ಲಿ ಇರಬಹುದು. ಮಾನ್ಯ ಸದಸ್ಯರ ಪ್ರಶ್ನೆ ಸರಿಯಾಗಿಲ್ಲ. ಬೋರ್ಡ್‌ನಲ್ಲಿ ಪ್ರಾತಿನಿಧ್ಯ ಕೊಡುವ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ, ಕೆ.ಎಸ್.ಆರ್.ಟಿ.ಸಿ. ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್ ಬಿಜಾಪುರ ವಿಭಾಗದಲ್ಲಿ ನಾನು ಸುಮಾರು ೭ ವರ್ಷಗಳಿಂದ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ನಮ್ಮ ಸಂಘಕ್ಕೆ ಆಡಳಿತ ಮಂಡಲಿಯಿಂದ ನಾನಾ ರೀತಿಯ ಕಿರುಕುಳ ಕೊಡುತ್ತಿದ್ದರು. ಇದನ್ನು ಮಾನ್ಯ ಮಂತ್ರಿಗಳು ತಪ್ಪಿಸಬೇಕು. ಆಡಳಿತ ಮಂಡಲಿಯ ವಿಷಯ ತಮಗೆ ಗೊತ್ತಿದೆ. ಈ ಕೆ.ಎಸ್.ಆರ್.ಟಿ.ಸಿ. ಇತಿಹಾಸ ಸಹ ತಮಗೆ ಗೊತ್ತಿದೆ. ಹಿಂದೆ ಶ್ರೀ ಶ್ರೀಕಂಠಮೂರ್ತಿ ಮತ್ತು ಶ್ರೀ ಸಂಪಂಗಿಯವರಿಗೆ ಯಾವ ರೀತಿ ಪ್ರಾತಿನಿಧ್ಯವನ್ನು ಕೊಟ್ಟಿದ್ದೀರೋ ಅದೇ ರೀತಿ ಈಗಲೂ ಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಮಾನ್ಯ ಮಂತ್ರಿಗಳ ಮೇಲೆ ನನಗೆ ವಿಶ್ವಾಸ ವಿದೆ. ಆದಷ್ಟು ಬೇಗ ಅದನ್ನು ಜಾರಿಗೆ ತರಬೇಕು. ಬೆಂಗಳೂರಿನ ಬಿ.ಟಿ.ಎಸ್. ವಿಭಾಗದಲ್ಲಿ ಸ್ಟೈಕ್ ಆಗುವ ಸಂಬಂಧವಿದೆಯಂತೆ, ಅದನ್ನು ಸಹ ತಾವು ಸ್ವಲ್ಪ ನೋಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ನನ್ನ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ಧನ್ಯವಾದಗಳು.

## ಗುಲ್ಬರ್ಗ ಜಿಲ್ಲೆಯಲ್ಲಿರುವ ಸಾರ್ವಜನಿಕ ಆಸ್ಪತ್ರೆ

೨೦೮೪. ಶ್ರೀ ಎಂ. ವೀರಯ್ಯಸ್ವಾಮಿ (ಚಿಂಚೋಳಿ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗ ಜಿಲ್ಲೆಯಲ್ಲಿರುವ ಸಾರ್ವಜನಿಕ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯಘಟಕ ಆಯುರ್ವೇದಿಕ್ ಆಸ್ಪತ್ರೆ ಹಾಗೂ ಇತರ ಆಸ್ಪತ್ರೆಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು),

ಆ) ಪ್ರತಿಯೊಂದು ಆಸ್ಪತ್ರೆಯು ಮಂಜೂರಾದ ಸಿಬ್ಬಂದಿಯ ವಿವರಗಳೇನು ಹಾಗೂ ಇದರಲ್ಲಿ ಖಾಲಿ ಇರುವ ಹುದ್ದೆಗಳಾವುವು ಮತ್ತು ಇವುಗಳನ್ನು ಯಾವಾಗ ತುಂಬಲಾಗುವುದು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಗುಲ್ಬರ್ಗ ಜಿಲ್ಲೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ವ್ಯಾಪ್ತಿಯಲ್ಲಿರುವ ಆಸ್ಪತ್ರೆಗಳ ಸಂಖ್ಯೆ,

| | | | |
|---|---|---|---|
| ೧) | ಸಾರ್ವಜನಿಕ ಆಸ್ಪತ್ರೆಗಳು | — | ೯ |
| ೨) | ಪ್ರಾಥಮಿಕ ಆರೋಗ್ಯ ಕೇಂದ್ರಗಳು | — | ೩೬ |
| ೩) | ಪ್ರಾಥಮಿಕ ಆರೋಗ ಘಟಕಗಳು | — | ೪೧ |
| ೪) | ಸಬ್ಸಿಡಿಯರಿ ಹೆಲ್ತ್ ಸೆಂಟರ್ | — | ೭ |

(ತಾಲ್ಲೂಕುವಾರು ವಿವರಗಳನ್ನು ಪಟ್ಟಿಯಲ್ಲಿ ಲಗತ್ತಿಸಿದೆ).

ಭಾರತೀಯ ವೈದ್ಯಪದ್ಧತಿಯ ಮತ್ತು ಹೋಮಿಯೋಪತಿ ಔಷಧಾಲಯಗಳ ಇಲಾಖೆಯ ವ್ಯಾಪ್ತಿಗೆ ಬರುವ ಸಂಖ್ಯೆ ಒಟ್ಟು ೨೪.

ಇವುಗಳಲ್ಲಿ ೧೫ ಆಸ್ಪತ್ರೆಗಳು ಆಯುರ್ವೇದ ಆಸ್ಪತ್ರೆಗಳು ಮತ್ತು ೯ ಯುನಾನಿ ಔಷಧಾಲಯಗಳು ಆಗಿರುತ್ತದೆ.

(ವಿವರಗಳನ್ನು ಪಟ್ಟಿಯಲ್ಲಿ ಲಗತ್ತಿಸಿದೆ)

ಆ) ವಿವರಗಳನ್ನು ಪಟ್ಟಿಯಲ್ಲಿ ಲಗತ್ತಿಸಿದೆ ಮಿತವ್ಯಯ ಆದೇಶ ಸಡಿಲಗೊಂಡ ನಂತರ ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

ಗುಲ್ಬರ್ಗಾ ಜಿಲ್ಲೆಯಲ್ಲಿರುವ ಸಾರ್ವಜನಿಕ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳ ತಾಲ್ಲೂಕುವಾರು ವಿವರ

### ಪ್ರಾಥಮಿಕ ಆರೋಗ್ಯ ಕೇಂದ್ರಗಳು

| ತಾಲ್ಲೂಕು | | |
|---|---|---|
| ಗುಲ್ಬರ್ಗ | ೧ | ಫರಹತಾಬಾದ್ |
| | ೨ | ಕಮಲಾಪುರ |
| | ೩ | ಕಲಹಂಗಂಗಾ |
| ಚಿತ್ತಾಪುರ | ೪ | ಕಾಳಗಿ |
| | ೫ | ವಾಡಿ |
| | ೬ | ಕೊಲ್ಲೂರು |
| | ೭ | ಹೆಬ್ಬಾಳ |